ಫಾರೆಸ್ಟ್ ಇಲಾಖಾ.

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 21ನೆ ಆಗಸ್ಟು 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಸರಕಾರದ ಶ್ರೀಗಂಧದ ಸಾಲೇಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರ ದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು.

ನಂ	ಡಿಸ್ಟ್ರಿಕ್ಟ್.	ಕೋಠಿ.	ಹರಾಜು ತಾರೀಖು.	ಹರಾಜಿಗೆ ಇಡಲ್ಪಡುವ ಗಂಧದ ಮರಗಳ ಪ್ರಮಾಣ.	ಷರಾ.
1	ಶಿವಮೊಗ್ಗ ...	ತೀರ್ಥಹಳ್ಳಿ ...	1909ನೆ ಇಸವಿ ನವಂಬರ್ ತಾರೀಖು 18	200	
2	ಡಿಟೋ ...	ಸಾಗರ ...	ಡಿಟೋ 22	100	
3	ಡಿಟೋ ...	ಶಿವಮೊಗ್ಗ ...	ಡಿಟೋ 25	500	
4	ಕಡೂರು ...	ತರೀಕೆರೆ ...	ಡಿಟೋ 29	(a)200	(a) ಚಿತ್ರದುರ್ಗದ
5	ಡಿಟೋ ...	ಚಿಕ್ಕಮಗಳೂರು ...	1909ನೆ ಡಿಸಂಬರ್ ತಾರೀಖು 2	400	10 ಟ್ರಗಳು ಶೇರಿರುತ್ತೆ.
6	ಹಾಸನ ...	ಹಾಸನ ...	ಡಿಟೋ 6	200	
7	ಬೆಂಗಳೂರು ...	ಬೆಂಗಳೂರು ...	ಡಿಟೋ 9	(b)100	(b) ತುಮಕೂರು
8	ಮೈಸೂರು ...	ಶ್ರೀರಂಗಪಟ್ಟಣ ...	ಡಿಟೋ 13	250	30 ಟ್ರಗಳು
9	ಡಿಟೋ ...	ಹುಣಸೂರು ...	ಡಿಟೋ 16	450	ಕೋಲಾರದ 5 ಟ್ರಗಳು ಶೇರಿರುತ್ತೆ.
			ಜುಮ್ಲಾ ...	2,400	

ಎಂ. ಮುತ್ತಣ್ಣ, ಕ್ವಾರ್ಟರ್ ಆಫ್ ಫಾರೆಸ್ಟ್ಸ್, ಇ ಮೈಸೂರು.

ಕೋಲಾರ ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ.

ಚಿಕ್ಕಬಳ್ಳಾಪುರ ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಜೋಡಿ ಜಡ್ಲತಿಮ್ಮನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಚಿಕ್ಕಬಳ್ಳಾಪುರ ತಾಲ್ಲೂಕು ಕಛೇರಿಯಲ್ಲಿ ಚಿಕ್ಕಬಳ್ಳಾಪುರ ಸಬ್ ಡಿವಿಜ್ಞ ಸಾಹೇಬರವರ ರೂಬರೂಯು 1909ನೆ ಇಸವಿ ಡಿಸೆಂಬರು 13ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1909ನೆ ಇಸವಿ ನವಂಬರ್ 18ನೆ ಮಾರ್ಕಂ ಮೈಸೂರು ಗೆಜೆಟ್ಟಿನ 2ನೆ ಭಾಗದ 863ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 17ನೆ ಮಾಹೆ ನವಂಬರು 1909.

ಸಕಲ ಜನಗಳಿಗೂ ತಿಳಿಯುವ ಖಯ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ಆ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪೂರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.